ಸಿನಿಮಾ ನೋಡಿ ಅಥವಾ ಪತ್ರಿಕೆಯಲ್ಲಿ ಯಾವುದೋ ಲೇಖನ ಓದಿ ಆಲೂಗಡ್ಡೆಯನ್ನೋ ನಾಯಿಯನ್ನೋ ಅಥವಾ ಮರವನ್ನೋ ಮಾತಾಡುವಂತೆ ಮಾಡ್ತಿನಿ ಅಂದ್ಕೊತಿರಿ. ಒಂದು ಸಲ ಐಡಿಯಾ ಹೊಳೆದರೆ ಕಾದಂಬರಿಯನ್ನು ಹೇಗೆ ಬರೀಬೇಕು ಹೇಗೆ ಮುಂದುವರೆಸಬೇಕು ಅಂತ ಯೋಚಿಸಲು ಶುರುಮಾಡುವಿರಿ. ಹಿಂದೆ ಯಾರೂ ಮಾಡಿರದ ರೀತಿಯಲ್ಲಿ ಮಾಡಿದಾಗ ಅದ್ಭುತ ಅನ್ನಿಸುತ್ತದೆ.

ವಿಷಯಗಳ ಕುರಿತು ಸುಮಾರು ವರ್ಷ ಯೋಚಿಸುತ್ತೇನೆ. ನನ್ನೊಳಗೆ ಐಡಿಯಾಗಳಿರಬಹುದು. ಅವುಗಳನ್ನು ನನ್ನ ಆಪ್ತಸ್ನೇಹಿತರ ಹತ್ತಿರ ಹೇಳಿರಬಹುದು. ನಾನು ಬರೆಯಬಹುದಾದ ಕಾದಂಬರಿಗಳಿಗೆ ಸಂಬಂಧಿಸಿದಂತೆ ಸುಮಾರು ಟಿಪ್ಪಣಿ ಪುಸ್ತಕಗಳನ್ನು ಇಟ್ಟುಕೊಂಡಿದಿನಿ. ಅವುಗಳನ್ನು ಬರೆಯದೇ ಹೋಗಬಹುದು. ಆ ಟಿಪ್ಪಣಿ ಪುಸ್ತಕಗಳನ್ನು ತೆಗೆದು ಟಿಪ್ಪಣಿ ಮಾಡಿಕೊಂಡೆ ಅಂದರೆ ಆ ಕಾದಂಬರಿ ಬರೆಯೋದು ಗ್ಯಾರೆಂಟಿ. ಒಂದು ಕಾದಂಬರಿ ಮುಗಿಯುತ್ತಿದ್ದ ಹಾಗೆ ನನ್ನ ಮನಸು ಇವುಗಳಲ್ಲೊಂದನ್ನು ಆರಿಸಿಕೊಂಡಿರುತ್ತೆ. ಒಂದು ಕಾದಂಬರಿ ಮುಗಿಸಿದ ಎರಡು ತಿಂಗಳ ಅನಂತರ ಮತ್ತೊಂದನ್ನು ಬರೆಯಲು ಶುರುಮಾಡ್ತಿನಿ.

- **ಹಲವು ಕಾದಂಬರಿಕಾರರು ತಮ್ಮ ಕೆಲಸ ಹೇಗೆ ಸಾಗಿದೆ ಅಂತ ಹೇಳುವುದಿಲ್ಲ. ನೀವು ಕೂಡ ಅದನ್ನು ರಹಸ್ಯವಾಗಿಯೇ ಇಡುವಿರಾ?**

ಕತೆಯನ್ನು ಎಂದೂ ಚರ್ಚಿಸುವುದಿಲ್ಲ. ಔಪಚಾರಿಕ ಸಂದರ್ಭಗಳಲ್ಲಿ ಜನ ಏನು ಬರಿತಿದೀರಿ ಅಂತ ಕೇಳಿದರೆ ನನ್ನದು ಒಂದು ಸಾಲಿನ ಸಿದ್ಧ ಉತ್ತರ: ಸಮಕಾಲೀನ ಟರ್ಕಿಯಲ್ಲಿ ನಡೆಯುವ ವಸ್ತುವನ್ನಾಧರಿಸಿದ ಕಾದಂಬರಿ. ನನ್ನನ್ನು ನೋಯಿಸುವುದಿಲ್ಲ ಅಂತ ನಂಬಿಕೆ ಇರುವ ಕೆಲವರ ಬಳಿ ಮಾತ್ರ ಮನಸುಬಿಚ್ಚಿ ಮಾತಾಡುತ್ತೇನೆ.

- **ವಿಮರ್ಶಕರು ನಿಮ್ಮ ಕಾದಂಬರಿಗಳನ್ನು ಆಧುನಿಕೋತ್ತರ ಎಂದು ಗುರುತಿಸುತ್ತಾರೆ. ನನಗೆ ನೀವು ನಿಮ್ಮ ನಿರೂಪಣೆಯ ತಂತ್ರಗಳನ್ನು ಸಾಂಪ್ರದಾಯಿಕ ಮೂಲಗಳಿಂದ ತೆಗೆದುಕೊಳ್ಳುತ್ತಿರಿ ಅನ್ನಿಸುತ್ತದೆ. ಉದಾಹರಣೆಗೆ ನೀವು ಪೌರಾತ್ಯ ಸಂಪ್ರದಾಯದ 'ದ ಥೌಸೆಂಡ್ ಅಂಡ್ ಒನ್ ನೈಟ್ಸ್' ಮತ್ತಿತರ ಕೆಲವು ಮಹಾಕೃತಿಗಳನ್ನು ಹೆಸರಿಸುವಿರಿ.**

'ದ ಬ್ಲಾಕ್ ಬುಕ್'ನಿಂದ ಇದು ಆರಂಭವಾಯಿತು. ಬೋರ್ಗೆಸ್ ಮತ್ತು ಕ್ಯಾಲ್ವಿನೋರನ್ನು ಮೊದಲೇ ಓದಿದ್ದೆ. 1985ರಲ್ಲಿ ನನ್ನ ಹೆಂಡತಿಯ ಜೊತೆ ಅಮೆರಿಕಕ್ಕೆ ಹೋದೆ. ಅಲ್ಲಿ ಮೊದಲ ಬಾರಿಗೆ ಅಮೆರಿಕನ್ ಸಂಸ್ಕೃತಿಯ ಶ್ರೀಮಂತಿಕೆ ಮತ್ತು ಪ್ರಾಮುಖ್ಯತೆ ನನಗರಿವಾಯಿತು. ಮಧ್ಯ ಏಷ್ಯಾದಿಂದ ಹೋದ ಟರ್ಕಿಯವನಾಗಿ, ಬರಹಗಾರನಾಗಲು ಯತ್ನಿಸುತ್ತಿದ್ದ ನನಗೆ ಹೆದರಿಕೆಯಾಯಿತು. ನನ್ನ ಹಿಂಜರಿಕೆಯಲ್ಲಿ ನನ್ನ 'ಬೇರು'ಗಳಿಗೆ ಹಿಂತಿರುಗಿದೆ. ನನ್ನ ಪೀಳಿಗೆಯವರು ಆಧುನಿಕ ರಾಷ್ಟ್ರೀಯ ಸಾಹಿತ್ಯವನ್ನು ಕಟ್ಟಿಕೊಳ್ಳಬೇಕು ಎನ್ನುವುದು ನನಗರ್ಥವಾಯಿತು.

ಬೋರ್ಗೆಸ್ ಮತ್ತು ಕ್ಯಾಲ್ವಿನೋ ನನ್ನನ್ನು ಸ್ವತಂತ್ರಗೊಳಿಸಿದರು. ಸಾಂಪ್ರದಾಯಿಕ ಇಸ್ಲಾಮಿಕ್ ಸಾಹಿತ್ಯ ಬಹಳ ಪ್ರತಿಗಾಮಿಯಾಗಿದ್ದು ರಾಜಕೀಯ ಅರ್ಥಗಳನ್ನು ಹೊಂದಿದೆ. ಅದನ್ನು ಇಂದಿನ ಸಂಪ್ರದಾಯವಾದಿಗಳು ಮೂರ್ಖ ರೀತಿಯಲ್ಲಿ ಬಳಸುತ್ತಿದ್ದಾರೆ. ಆ ಸಾಹಿತ್ಯವನ್ನು ನಾನು ಬಳಸಿಕೊಳ್ಳಬಹುದು ಎನ್ನುವ ಆಲೋಚನೆಯೇ ಬಂದಿರಲಿಲ್ಲ. ಅಮೆರಿಕಕ್ಕೆ ಹೋದಮೇಲೆ ಬೋರ್ಗೆಸ್ ಅಥವಾ ಕ್ಯಾಲ್ವಿನೋ ಶೈಲಿಯಲ್ಲಿ ಅದನ್ನು ಬಳಸಿಕೊಳ್ಳಬಹುದು ಎನ್ನಿಸಿತು. ಇಸ್ಲಾಮಿಕ್ ಸಾಹಿತ್ಯದಲ್ಲಿ ಧರ್ಮ ಯಾವುದು ಮತ್ತು ಸಾಹಿತ್ಯ ಯಾವುದು ಎನ್ನುವುದನ್ನು ಸರಿಯಾಗಿ